ಶ್ರೀ ಕೆ. ಹೆಚ್. ರಂಗನಾಥ್.—ಮಾನ್ಯ ಅಧ್ಯಕ್ಷರೇ, ಮುಖ್ಯ ಮಂತ್ರಿಯವರ ಪರವಾಗಿ ನಾನಂ ಉತ್ತರ ಕೊಡುತ್ತೇನೆ.

ದಿನಾಂಕ. ೭೯–೧೦–೯೦ ರಂದು ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ತಾಲ್ಲೂಕ್‌ನ ಮಾದೇರು ಗ್ರಾಮದ ಪರಮೇಶ್ವರಪ್ಪ ಎಂಬುವರು ತಮ್ಮ ಸಹೋದರ ಕೆಂಚದ್ಯಾಮಪ್ಪನವರಂ ದಿನಾಂಕ ೨೦–೧೦–೯೦ ರಿಂದ ಕಾಣೆಯಾಗಿದ್ದಾರೆ ಎಂಬ ಫಿರ್ಯಾದಿನ ಮೇಲೆ, ಮನಂಷ್ಯ ಕಾಣೆಯಾಗಿದ್ದಾನೆ ಎಂದು ಪ್ರಕರಣ ನೊಂದಾಯಿಸಿಕೊಂಡು ಪೋಲೀಸ್ ಸಬ್ ಇನ್ಸ್‌ಪೆಕ್ಟರ್. ಹೊಳಲ್ಕೆರೆ ಇವರು ತನಿಖೆ ಕೈಗೊಂಡರಂ, ನಂತರ ಚಿತ್ರದುರ್ಗದ ಪೊಲೀಸ್ ಸರ್ಕಲ್ ಇನ್ಸ್‌ಪೆಕ್ಟರ್‌ರವರಂ ಈ ಪ್ರಕರಣದ ಮುಂದಿನ ತನಿಖೆಗೆ ತೆಗೆದುಕೊಂಡು ತನಿಖೆ ಮುಂದುವರಿಸಿದರು.

ಕೆಂಚದ್ಯಾಮಪ್ಪನವರ ಸಹೋದರರಾದ ಪರಮೇಶ್ವರಪ್ಪನವರು ದಿನಾಂಕ. ೧೬–೩–೯೧ ರಂದು ಅರಕ್ಷಕ ಮಹಾ ನಿರ್ದೇಶಕರು, ಕರ್ನಾಟಕ ಇವರಿಗೆ ಒಂದು ಅರ್ಜಿ ಕೊಟ್ಟರು, ಅದರಲ್ಲಿ ಅವರು ಕೆಂಚ ದ್ಯಾಮಪ್ಪನವರಂ ಹನುಮಂತಪ್ಪ ಮತ್ತು ಇತರರಿಂದ ಕೊಲೆಗೀಡಾಗಿದ್ದಾರೆಂದಂ ಸಂಶಯ ವ್ಯಕ್ತ ಪಡಿಸಿದ್ದಾರೆ. ಈ ಅರ್ಜಿಯನ್ನು ಸಿ. ಓ. ಡಿ. ಯವರಿಗೆ ವಿಚಾರಣೆಗಾಗಿ ಕೊಡಲಾಯಿತು, ಸಿ ಓ ಡಿ ವಿಚಾರಣೆಯಿಂದ ಇದು ಕೊಲೆ ಪ್ರಕರಣವೆಂದು ತಿಳಿದು ಬಂದಿತು. ಆದುದರಿಂದ ಅಪರಾಧ ಸಂಖ್ಯೆ ೧೬೯೦ ಕಲಂ ೩೦೮–೨೦೧–೩೪–೧೧೪ ಸಹ ವಾಚಿಸಲು ೧೨೦ (ಬಿ ಭಾ, ದಂ. ಸಂ. ಪ್ರಕಾರ ಕೊಲೆ ಪ್ರಕರಣವನ್ನು ಹೊಳಲ್ಕೆರೆ ಪೊಲೀಸ್ ಠಾಣೆಯಲ್ಲಿ ದಿನಾಂಕ. ೧೧–೪–೯೦ ರಂದು ನೋಂದಾಯಿಸ ಲಾಯಿತು. ಇಲ್ಲಿಯವರೆಗೂ ಮಾಡಿರುವ ತನಿಖೆಯಿಂದ ಮೃತರು ಹನುಮಂತಪ್ಪನ ಮಗಳು ನಿರ್ಮಲ ರವರ ಜೊತೆ ಅನೈತಿಕ ಸಂಬಂಧವಿಟ್ಟುಕೊಂಡಿದ್ದರಿಂದ, ಹನುಮಂತಪ್ಪ ಮತ್ತು ಇತರರು ಕೆಂಚ ದ್ಯಾಮಪ್ಪನವರನ್ನು ದಿನಾಂಕ. ೨೦–೧೦–೯೦ ರಂದು ಕೊಲೆ ಮಾಡಿದ್ದಾರೆಂದು ರುಜುವಾತು ಆಯಿತು. ೬ ಜನರನ್ನು ದಿನಾಂಕ. ೧೧–೪–೯೦ ರಂದು ದಸ್ತಗಿರಿ ಮಾಡಿ, ನ್ಯಾಯಾಂಗ ಬಂಧನಕ್ಕೆ ಕಳುಹಿಸಲಾಗಿದೆ ನಂತರ ಅವರನ್ನು ದಿನಾಂಕ. ೧೧–೬–೯೦ ರಂದು ಹೈಕೋರ್ಟಿನ ಜಾಮೀನಿನ ಮೇಲೆ ಬಿಡುಗಡೆಯಾದರು. ಒಬ್ಬ ಆಪರಾಧಿ ನ್ಯಾಯಾಲಕ್ಕೆ ಶರಣಾಗತರಾಗಿ. ಅವರು ಇನ್ನೂ ನ್ಯಾಯಾಂಗ ಬಂಧನದಲ್ಲಿದ್ದಾರೆ. ಪ್ರಕರಣವು ಇನ್ನೂ ಸಿ ಓ ಡಿ ತನಿಖೆಯಲ್ಲಿದೆ ಮತ್ತು ಶೀಘ್ರದಲ್ಲೇ ಅಂತಿಮಗೊಳಿಸಲಾಗುವುದು.

ಚಿತ್ರದುರ್ಗದ ಸರ್ಕಲ್ ಪೊಲೀಸ್ ಇನ್ಸ್‌ಪೆಕ್ಟರ್ ಮತ್ತು ಹೊಳಲ್ಕೆರೆ ಪೋಲೀಸ್ ಸಬ್‌ಇನ್ಸ್ ಪೆಕ್ಟರ್‌ರವರನ್ನು ಚಿತ್ರದುರ್ಗ ಜಿಲ್ಲೆಯಿಂದ ವರ್ಗ ಮಾಡಲಾಗಿದೆ. ಪೋಲೀಸ್ ಅಧಿಕಾರಿಗಳ ಬಗ್ಗೆ ಏನಾದರೂ ಲೋಪ ದೋಷಗಳ ಪಾತ್ರವಿದ್ದರೆ, ಸಿ. ಓ. ಡಿ. ಯಿಂದ ವರದಿ ಬಂದ ನಂತರ ಸೂಕ್ತ ಪೂರ್ಣ ಕ್ರಮ ತೆಗೆದುಕೊಳ್ಳಲಾಗುತ್ತದೆ.

7. ಬೆಳಗಾವಿ ಜಿಲ್ಲೆಯ ರಾಷ್ಟ್ರೀಯ ಹೆದ್ದಾರಿ ನಂ. 4 ಮತ್ತು ಜಾಂಬೋಟಿ–ಜತ್ತ ರಾಜ್ಯ ಹೆದ್ದಾರಿ ಇವರೆಡಕ್ಕೂ ಸಂಪರ್ಕ ಕಲ್ಪಿಸುವ ಬಗ್ಗೆ.

ಶ್ರೀ ಬಾಬಾ ಗೌಡ ರುದ್ರಗೌಡ.—(ಕಿತ್ತೂರು).—ಮಾನ್ಯ ಅಧ್ಯಕ್ಷರೇ, ಬೆಳಗಾವಿ ಜಿಲ್ಲೆಯ ರಾಷ್ಟ್ರೀಯ ಹೆದ್ದಾರಿ ನಂ. ೪ ಮತ್ತು ಜಾಂಬೋಟಿ–ಜತ್ತ ರಾಜ್ಯ ಹೆದ್ದಾರಿ ಇವರೆಡಕ್ಕೂ ಸಂಪರ್ಕ ಕಲ್ಪಿಸುವ ಎಂ. ಕೆ. ಹುಬ್ಬಳ್ಳಿ–ಯರಡಾಲ ರಸ್ತೆ ಅತ್ಯಂತ ಹೆಚ್ಚು ಟ್ರಾಫಿಕ್ ಇರುವ ರಸ್ತೆ. ಈ ಹವಿ ನಾಲ್ಕು ಕಿ. ಮಿ. ರಸ್ತೆ ತೀರ ಕೆಟ್ಟು ಹೋಗಿದ್ದು ಚಕ್ಕಡಿ ಗಾಡಿಗಳು ಮತ್ತು ವಾಹನಗಳು ಮೊವತ್ತೆರಡು ಕಿ. ಮಿ. ಸುತ್ತು ಬಳಸಿ ಹೋಗಬೇಕಾಗಿದೆ. ಮಳೆಯು ಪ್ರಾರಂಭವಾದರೆ ಗಾಡಿ ಸಹಾ ಸಂಚಾರ ಮಾಡುವುದು ಕಷ್ಟ ಸಾಧ್ಯ. ಎಂ. ಕೆ. ಹುಬ್ಬಳ್ಳಿ ಸಕ್ಕರೆ ಕಾರ್ಖಾನೆಗೆ ಮತ್ತು ಬೈಲಹೊಂಗಲ ತಾಲ್ಲೂಕು ಸ್ಥಳಕ್ಕೆ ಸಂಪರ್ಕವೇ ಕಡಿದು ಹೋಗಿದೆ. ಆದ್ದರಿಂದ ಕನಿಷ್ಟ ದುರಸ್ತಿ ಮಾಡಿ ಈ ಕೂಡಲೇ ಈ ರಸ್ತೆ ಸಂಪರ್ಕ ಸುಗುಮಗೊಳಿಸಬೇಕೆಂದು ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿ ಗೌಡ.—(ನೀರಾವರಿ ಮತ್ತು ಲೋಕೋಪಯೋಗಿ ಸಚಿವರು).—ಮಾನ್ಯ ಅಧ್ಯಕ್ಷರೇ.

ಎಂ. ಕೆ. ಹುಬ್ಬಳ್ಳಿ–ಯರಡಾಲ ರಸ್ತೆಯು ಸುಮಾರು ೧೬ ಕಿ. ಮೀ. ಉದ್ದವಿದ್ದು, ಸಂಖ್ಯೆ ೪ ರ ರಾಷ್ಟ್ರೀಯ ಹೆದ್ದಾರಿ ಹಾಗೂ ಬೈಲಹೊಂಗಲದ ಮೇಲೆ ಹಾದುಹೋಗುವ ರಾಜ್ಯ ಹೆದ್ದಾರಿಗೆ ಸಂಪರ್ಕ ಕಲ್ಪಿಸುತ್ತದೆ. ಎಂ. ಕೆ. ಹುಬ್ಬಳ್ಳಿಯಿಂದ ಬೈಲಹೊಂಗಲ ತಾಲ್ಲೂಕು ಸ್ಥಳಕ್ಕೆ ಶೀಘ್ರ ಸಂಪರ್ಕ ಕಲ್ಪಿಸುವ ರಸ್ತೆಯು ಇದಾಗಿದೆ. ಇದರಲ್ಲಿ ಸುಮಾರು ೯ ಕಿ. ಮೀ. ರಸ್ತೆಯು ನಾದುರಸ್ತಿಯಲ್ಲಿದೆ.

ಈ ರಸ್ತೆಯು ಜಿಲ್ಲಾ ಪರಿಷತ್ತಿನ ವ್ಯಾಪ್ತಿಯಲ್ಲಿ ಬರುತ್ತದೆ. ಈ ರಸ್ತೆಯನ್ನು ದುರಸ್ತಿಯಲ್ಲಿಟ್ಟು ಸುಗಮ ಸಂಚಾರಕ್ಕೆ ಅನುವು ಮಾಡಿಕೊಡುವಂತೆ ಜಿಲ್ಲಾ ಪರಿಷತ್ತಿನವರಿಗೆ ಸೂಚಿಸಲಾಗುವುದು.

ಅಧ್ಯಕ್ಷರು.—ತಾವುಗಳು ದಯವಿಟ್ಟು ಬರೆದು ಕಳುಹಿಸಿಕೊಡಿ. ನಿಯಮಗಳ ಪ್ರಕಾರ ಈಗ ತಮಗೆ ನಾನು ಅವಕಾಶವನ್ನು ಕೊಡುವುದಿಲ್ಲ. ಪ್ರಸ್ತಾಪ ಮಾಡುವ ವಿಚಾರದ ಬಗ್ಗೆ ತಾವುಗಳು ಬರೆದು ಕೊಡಬೇಕು. ನಿಯಮಾವಳಿಗಳ ಪ್ರಕಾರ ಈ ಸದನದಲ್ಲಿ ವಿಷಯವನ್ನು ಪ್ರಸ್ತಾಪ ಮಾಡ ಬೇಕಾದರೆ ಪೂರ್ವಬಾವಿಯಾಗಿ ನನಗೆ ಬರೆದು ಕಳುಹಿಸಬೇಕು. ಹಾಗೆ ನಿಯಮವನ್ನು ಅನುಸರಿಸದಿದ್ದರೆ ನಾನು ಅದಕ್ಕೆ ಅವಕಾಶ ಮಾಡಿಕೊಡುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್.—ಈವೊತ್ತಿನ ದಿವಸ ನಾವುಗಳು ತಮ್ಮಲ್ಲಿ ಅರಿಕೆ ಮಾಡಿಕೊಳ್ಳಿತ್ತಿದ್ದೇವೆ. ಇನ್ನು ಮೇಲೆ ತಾವುಗಳು ಅಪ್ಪಣೆ ಕೊಡಿಸಿದ ಪ್ರಕಾರ ನಿಯಮಾವಳಿಗಳನ್ನು ಅನುಸರಿಸುತ್ತೇವೆ. ದಯವಾಡಿ ಕೋಪಿಸಿಕೊಳ್ಳಬೇಡಿ...

ಅಧ್ಯಕ್ಷರು.—ಸಚಿವ ಸಂಪುಟ್ಟಕ್ಕೆ ಜಂಟಿ ಜವಾಬ್ದಾರಿ ಇರುತ್ತದೆ. ಒಬ್ಬರ ಕರ್ತವ್ಯವನ್ನು ಅವರ ಗೈರು ಹಾಜರಿಯಲ್ಲಿ ನಿರ್ವಹಿಸಿದವರು ಮಾಡಬಹುದು.....

ಶ್ರೀ ವಾಟಾಳ್ ನಾಗರಾಜ್.—ಯಾರು ಅವರ ಕೆಲಸವನ್ನು ನಿರ್ವಹಿಸುತ್ತಾರೆ ಎಂದು ಹೇಳು ಬಹುದಲ್ಲ? ...

(ಗೊಂದಲ)

ಅಧ್ಯಕ್ಷರು.—ದಯವಿಟ್ಟು ಒಬ್ಬೊಬ್ಬರೇ ಮಾತನಾಡಿ.....

ಶ್ರೀ ವೆಂಕಟೇಶ್.—ಅಧ್ಯಕ್ಷರೆ.....

MR. SPEAKER —Mr. Venkatesh. I will have to seriously warn you The Deputy Leader of Opposition...

ಶ್ರೀ ಪಿ. ಜಿ. ಆರ್. ಸಿಂಧ್ಯ.—ಸದನದಲ್ಲಿ ಯಾವುದೇ ವಿಚಾರವನ್ನು ಪ್ರಸ್ತಾಪ ಮಾಡಬೇಕಾದರೆ ಅದನ್ನು ಬರವಣಿಗೆಯ ಮೂಲಕ ಅಥವಾ ಯಾವುದಾದರೂ ಒಂದು ರೂಪದಲ್ಲಿ ತಮ್ಮ ಗಮನಕ್ಕೆ ತರ ಬೇಕು ಅಥವಾ ಪೂರ್ವಭಾವಿಯಾಗಿ ನಿಯಮಗಳ ಚೌಕಟ್ಟಿನಲ್ಲಿ ತಿಳಿಸಿ ಅನಂತರ ಚರ್ಚೆ ಮಾಡಬೇಕೆಂದು ಹೇಳಿದ್ದೀರಿ. ಆ ಬಗ್ಗೆ ನಪ್ಪಿ ಕಡೆಯಿಂದ ಎರಡು ಮಾತಿಲ್ಲ.

MR.—SPEAKAER.—Thank you.

ಶ್ರೀ ಪಿ. ಜಿ. ಆರ್. ಸಿಂಧ್ಯ.—ತಾವುಗಳು ಅನೇಕ ಸಂದರ್ಭಗಳಲ್ಲಿ ನಮ್ಮ ಎಲ್ಲಾ ಸದಸ್ಯರುಗಳ ಬಗ್ಗೆ ಔದಾರ್ಯವನ್ನು ತೋರಿಸಿದ್ದೀರಿ. ಚರ್ಚೆ ಮಾಡಲು ಅವಕಾಶವನ್ನು ಕೊಟ್ಟಿದ್ದೀರಿ. ಕೆಲವೊಮ್ಮೆ ಜನರ ಹಿತದೃಷ್ಟಿಯಿಂದ ನಿಯಮಾವಳಿಗಳನ್ನು ಬಿಟ್ಟು ಕೂಡ ಚರ್ಚೆ ಮಾಡಬೇಕಾದ ಸಂದರ್ಭಗಳು ಬರುತ್ತವೆ. ಅಂಥ ಸಂದರ್ಭಗಳಲ್ಲಿ ಕೂಡ ಸದನದ ಗೌರವವನ್ನು ಎತ್ತಿ ಹಿಡಿಯುವ ದೃಷ್ಟಿಯಿಂದ ಔದಾರ್ಯವನ್ನು ತೋರಿಸಿದ್ದೀರಿ. ಇವೊತ್ತು ಕೂಡ ನಮಗೆ ಸಾಕಷ್ಟು ಅವಕಾಶವನ್ನು ಕೊಟ್ಟಿದ್ದೀರಿ. ಆದರೆ ಇವೊತ್ತು ಮಾನ್ಯ ವಾಟಾಳ್ ನಾಗರಾಜ್ ಮತ್ತು ಇತರರು ಎತ್ತಿರತಕ್ಕಂಥ ವಿಚಾರ ಏನೆಂದರೆ, ತಾವುಗಳು ಹೇಳಿದಂತೆ ಇಲ್ಲಿ ಸದನದಲ್ಲಿ ಎಲ್ಲಾ ಪ್ರಮುಖ ಮಂತ್ರಿಗಳು ಇದ್ದಾರೆ. ಮಾನ್ಯ ಸಚಿವರಾದ ಶಿವಣ್ಣನವರು ವಿದೇಶಕ್ಕೆ ಹೋಗಿದ್ದಾರೆ. ಸದನ ನಡೆಯುತಕ್ಕಂಥ ಸಂದರ್ಭದಲ್ಲಿ ಸಾಮಾನ್ಯವಾಗಿ ಯಾವುದೇ ಸದನದ ಸದಸ್ಯರು ಡೆಲ್ಲಿಗೆ ಹೋದರೂ ಕೂಡ ಸದನಕ್ಕೆ ತಿಳಿಸುತ್ತಾರೆ, ವಿದೇಶಕ್ಕೆ ಹೋದರೂ ಕೂಡ ಅಧ್ಯಕ್ಷರಿಗೆ ತಿಳಿಸುತ್ತಾರೆ, ಅಪ್ಪಣೆ ಪಡೆದುಕೊಳ್ಳುತ್ತಾರೆ. ತಾವೂ ಕೂಡ ಸದನದ ಒಪ್ಪಿಗೆ ಪಡೆದು ವಿದೇಶಕ್ಕೆ ಹೋಗುತ್ತೀರಿ. You are the custodian of the House. ಇದೊಂದು ಸತ್‌ಸಂಪ್ರದಾಯ ಈ ಗೌರವಾನ್ವಿತ ಮನೆಯಲ್ಲಿ ನಡೆದುಕೊಂಡು ಬಂದಿರತಕ್ಕಂಥ ಸಂಪ್ರದಾಯವಾಗಿದೆ ಸದಸ್ಯರ ಕಾತುರತೆ ಈ ವಿಚಾರದಲ್ಲಿ ಏಕೆ ಅಂದರೆ, ಗಣಿ ಮತ್ತು ಭೂ ವಿಜ್ಞಾನ ಖಾತೆಯ ಚರ್ಚೆ ಮತ್ತು ಉತ್ತರ ಮುಂಗಿದ ಕೂಡಲೇ ಸಚಿವರು ತತ್‌ಕ್ಷಣವೇ ಮಾಯವಾಗಿದ್ದಾರೆ. ಇದಕ್ಕೆ ಏನು ಕಾರಣ ಇರಬಹುದು ಎಂಬುದು ಅವರ ಕಾತುರಕ್ಕೆ ಕಾರಣವಾಗಿದೆ. ಆದುದರಿಂದ ಸರಕಾರದವರು ಇದನ್ನು ತಿಳಿಸಬೇಕು ಸಚಿವರು ಖಾಸಗೀ ಕೆಲಸದ ಮೇಲೆ ಹೋಗಿದ್ದಾರೋ ಅಥವಾ ಸರಕಾರದ ಕೆಲಸದ ಮೇಲೆ ಹೋಗಿದ್ದಾರೋ ಎಂದು ತಿಳಿಸಬೇಕು. ಈ ಬಗ್ಗೆ ತಿಳಿದುಕೊಳ್ಳಲು ಎಲ್ಲಾ ಮಾನ್ಯ ಸದಸ್ಯರು ಬಯಸಿದ್ದಾರೆ. ಹೀಗಾಗಿ ಅದನ್ನು ತಿಳಿದುಕೊಳ್ಳಬೇಕೆನ್ನುವ ದೃಷ್ಟಿಯಿಂದ ತಮ್ಮ ಗಮನಕ್ಕೆ ತರುತ್ತಿದ್ದಾರೆ.